**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು**
**ಹುಕ್ಕೇರಿ**

CC No. 282 /2020
CW- 6/ PW- 2

ಹೆಸರು : ಗಂಗಾಧನ ನಾಗಪ್ಪ ಬೋರಗಲ್ಲಿ
ವಯಸ್ಸು : 54 ವರ್ಷ
ಉದ್ಯೋಗ : ಒಕ್ಕಲುತನ
ವಾಸಸ್ಥಳ : ಸಂಕೇಶ್ವರ

(ದಿನಾಂಕ 06-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ -**

**1.** ಚಾಸಾ-1 ನನಗೆ ಪರಿಚಯ, ಆತ ನನ್ನ ಸ್ನೇಹಿತ. ಆರೋಪಿಯೂ ಸಹ ನನಗೆ ಪರಿಚಯ. 2019 ರಲ್ಲಿ ಈ ವ್ಯವಹಾರ ಆಗಿತ್ತು. ಶಂಕರ್ ಲಕ್ಷ್ಮಣ ಪಟ್ಟೇದ ಇವರು ಈ ಪ್ರಕರಣದಲ್ಲಿ ದೂರು ಕೊಟ್ಟಿದ್ದು, ಆರೋಪಿಯು ಅಲೊವೇರಾ ಬೆಳೆಯನ್ನು ಬೆಳೆಯಲು ಶಂಕರ್ ಲಕ್ಷ್ಮಣ ಪಟ್ಟೇದಗೆ ಬೀಜ ಕೊಟ್ಟಿದ್ದರು. ಅಲೊವೇರಾ ಸಸಿ ಕೊಡುತ್ತಿದ್ದರು, ಆ ಸಸಿಯನ್ನು ಬೋಪಳೆ ಎಂಬ ಏಜೆಂಟ್ ಕೊಡುತ್ತಿದ್ದರು. ಆ ಬೆಳೆಗೆಯನ್ನು ಶಂಕರ್ ಲಕ್ಷ್ಮಣ ಪಟ್ಟೇದ ತಮ್ಮ 3 ಎಕರೆ ಜಮೀನಿನಲ್ಲಿ ಹಚ್ಚಿದ್ದರು. ಅದು ಬೆಳೆದ ನಂತರ ಆರೋಪಿಗೆ ಕಟಿಂಗ್ ಮಾಡಿಕೊಂಡು ಹೋಗುವಂತೆ ಹೇಳಿದರು. ಟನ್ ಗೆ ರೂ,8,000/- ಗಳಂತೆ ಬೆಲೆ ನಿಗಧಿ ಮಾಡಿದರು. ಆರೋಪಿಯು 2 ಬಾರಿ ಕಂಟಿಂಗ್ ಮಾಡಿಕೊಂಡು ಹೋಗಿದ್ದರು. ಆರೋಪಿಯು ಹಣ ಕೊಡಬೇಕಾಗಿತ್ತು, ಆದರೆ ಹಣ ಕೊಡಲಿಲ್ಲ, ಚೆಕ್ ಕೊಟ್ಟಿದ್ದರು. ಎಷ್ಟು ರೂಪಯಿ ಚೆಕ್ ಎಂದು ನನಗೆ ಗೊತ್ತಾಗಲಿಲ್ಲ, ಆದರೆ ಶಂಕರ್ ಲಕ್ಷ್ಮಣ ಪಟ್ಟೇದ ಈ ವಿಚಾರ ನನಗೆ ಹೇಳಿದ್ದರು. ಆರೋಪಿಯು ಹಣದ ಬದಲಾಗಿ 2 ಚೆಕ್ ಕೊಟ್ಟಿದ್ದರು. ಆ ಎರಡೂ ಚೆಕ್ ಗಳು ಬೌನ್ಸ ಆಗಿದ್ದವು ಎಂದು ಶಂಕರ್ ಲಕ್ಷ್ಮಣ ಪಟ್ಟೇದ ಹೇಳಿದರು. ರೈತರ ಸಂಘದವರಿಗೆ ಈ ವಿಚಾರ ತಿಳಿಸಿದಾಗ, ನಾವು ಮತ್ತು ಶಂಕರ್ ಲಕ್ಷ್ಮಣ ಪಟ್ಟೇದ ಎಲ್ಲರೂ ಪೊಲೀಸ ಠಾಣೆಗೆ ಹೋಗಿ ಅಲ್ಲಿ ದೂರು ಕೊಟ್ಟರು. ನಂತರ ಪೋಲೀಸರು ದೂರು ಪಡೆದುಕೊಂಡು ಹೊಲಕ್ಕೆ ಹೋಗಿ ಪಂಚನಾಮೆ ಮಾಡಿದರು. ಪೊಲೀಸ್ ಠಾಣೆಗೆ ಬಂದಾಗ ಪೊಲೀಸ ಠಾಣೆಯಲ್ಲಿ ಆರೋಪಿಯು ದುಡ್ಡು ಕೊಡುತ್ತೇನೆ ಎಂದು ಒಂದು ಬಾಂಡ್ ಬರೆದುಕೊಟ್ಟನು. ಆ

ಸದರಿ ಬಾಂಡ್ ಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಬಾಂಡ್ ಅನ್ನು ತೋರಿಸಲಾಗಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿ.ಪಿ-3(ಬಿ) ಎಂದು ಗುರುತಿಸಲಾಯಿತು.

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.**

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

**Sd/-**
(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ.

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು**
**ಹುಕ್ಕೇರಿ**

CC No. 282 /2020
CW- 3/ PW- 1

ಹೆಸರು : ರವಿಂದ್ರ ಅಶೋಕ ಮರಡಿ
ವಯಸ್ಸು : 43 ವರ್ಷ
ಉದ್ಯೋಗ : ಹೊಲಮನೆ
ವಾಸಸ್ಥಳ : ಸಂಕೇಶ್ವರ

(ದಿನಾಂಕ 06-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ -**

**1.** ಚಾಸಾ-1 ನನಗೆ ಪರಿಚಯ, ಆತ ನನ್ನ ಸ್ನೇಹಿತ. ಆರೋಪಿಯೂ ಸಹ ನನಗೆ ಪರಿಚಯ. 2019 ರಲ್ಲಿ ಈ ವ್ಯವಹಾರ ಆಗಿತ್ತು. ಶಂಕರ್ ಲಕ್ಷ್ಮಣ ಪಟ್ಟೇದ ಇವರು ಈ ಪ್ರಕರಣದಲ್ಲಿ ದೂರು ಕೊಟ್ಟಿದ್ದು, ಆರೋಪಿಯು ಅಲೊವೇರಾ ಬೆಳೆಯನ್ನು ಬೆಳೆಯಲು ಶಂಕರ್ ಲಕ್ಷ್ಮಣ ಪಟ್ಟೇದಗೆ ಬೀಜ ಕೊಟ್ಟಿದ್ದರು. ಬೆಳೆದ ನಂತರ 80 ಟನ್ ಆರೋಪಿ ಒಯ್ದರು. ಒಂಕು ಟನ್ ಗೆ ರೂ,8,000/- ಗಳಂತೆ ಬೆಲೆ ನಿಗಧಿ ಮಾಡಿದರು. 80 ಟನ ಆದ ನಂತರ ಆರೋಪಿಯು ಮತ್ತೊಮ್ಮೆ 100 ಟನ್ ಅಲೊವೇರ ಬೆಳೆಯನ್ನುಚಾಸಾ-1 ಇವರ ಕಡೆಯಿಂದ ಒಯ್ದರು, ಆದರೆ ಅದಕ್ಕೆ ರೊಕ್ಕ ಕೊಡಲಿಲ್ಲ. ಅದರ ಬೆಲೆ ರೂ. 10,00,000/- ಇತ್ತು. ನಾನು ಮತ್ತು ಚಾಸಾ-1 ಗಡಹಿಂಗ್ಲಜದಲ್ಲಿರುವ ಆರೋಪಿಯ ಮನೆಗೆ ಹೋದೆವು. ಅಲ್ಲಿ ಆರೋಪಿ ಮತ್ತು ಆತನ ಹೆಂಡತಿ ನಮ್ಮ ಜೊತೆ ಜಗಳ ತೆಗೆದರು, ನಾವು ರೊಕ್ಕ ಕೊಡುವುದಿಲ್ಲ ಏನು ಮಾಡಿಕೊಳ್ಳುತ್ತೀರೋ ಮಾಡಿಕೊಳ್ಳಿ ಎಂದು ಜಗಳ ತೆಗೆದರು. ಅಲ್ಲಿ ಹಿರಿಯರು ಬಂದು ಪಂಚಗಿ ಮಾಡಿ ಮುಗಿಸಿದರು. ಹಿರಿಯರು ರೂ. 10,00,000/- ಕೊಡು ಎಂದು ಆರೋಪಿಗೆ ಹೇಳಿದರು. ಆರೋಪಿಯು 2 ಚೆಕ್ ಗಳನ್ನು ಬರೆದುಕೊಟ್ಟರು. ಆರೋಪಿಯು ರೂ.2,00,000/- ಲಕ್ಷಗಳ ಒಂದು ಚೆಕ್ ಹಾಗೂ ರೂ.3,00,000/- ಒಂದು ಚೆಕ್ ಕೊಟ್ಟರು. ಆರೋಪಿಯು ಇನ್ನುಳಿದ ರೂ.5,00,000/- ಲಕ್ಷ ಕೊಡಲು 2 ತಿಂಗಳು ಟೈಮ್ ತೆಗೆದುಕೊಂಡರು. ಆರೋಪಿಯು ಡೇಟ ಹಾಕಿ ಚೆಕ್ ಕೊಟ್ಟಿದ್ದರಿಂದ ಚಾಸಾ-1 ರವರು ಸಂಕೇಶ್ವರದಲ್ಲಿರುವ ತಮ್ಮ ಬ್ಯಾಂಕ್ ಖಾತೆಯಲ್ಲಿ ಚೆಕಗಳನ್ನು ಕೊಟ್ಟಾಗ ಆ

ಎರಡೂ ಚೆಕ್ ಗಳು ಬೌನ್ಸ್ ಆದವು. ಆರೋಪಿಯು ಚೆಕ್ ಗಳು ಬೌನ್ಸ್ ಆದ ನಂತರ ನಮ್ಮನ್ನು ಭೇಟಿಯಾಗಿಲ್ಲ. ನಾವು ಆತನನ್ನು ಭೇಟಿ ಆಗಲಿಲ್ಲ, ನಂತರ ಚಾಸಾ-1 ಪೊಲೀಸ ಠಾಣೆಗೆ ಹೋಗಿ ದೂರು ಕೊಟ್ಟರು. ಪೊಲೀಸರು ಕರೆಸಿದಾಗ ಆರೋಪಿಯು ಪೊಲೀಸ ಠಾಣೆಗೆ ಬಂದರು. ಆರೋಪಿಯು ಪೊಲೀಸ ಠಾಣೆಯಲ್ಲಿ ಹಣ ಕೊಡುತ್ತೇನೆ ಎಂದು ಹೇಳಿದ, ಆದರೆ ಹಣ ಕೊಡಲಿಲ್ಲ. ಆರೋಪಿಯು ಚಾಸಾ-1 ರವರಿಗೆ ಹಣ ಕೊಡುತ್ತೆನೆ ಎಂದುಒಂದು ಬಾಂಡ್ ಮಾಡಿಕೊಟ್ಟಿದ್ದ, ನಾನು ಅದಕ್ಕೆ ಸಹಿ ಮಾಡಿದ್ದೆ. ಆದರೆ ಆರೋಪಿ ಹಣ ಕೊಡಲಿಲ್ಲ. ಶಂಕರ್ ಪಟ್ಟೇದ 2025 ರಲ್ಲಿ ತೀರಿಕೊಂಡರು. ಆರೋಪಿಯು ಹಣ ಕೊಡದೇ ಇದ್ದಾಗ ಶಂಕರ್ ಪಟ್ಟೇದ ಇವರು ಹುಕ್ಕೇರಿ ಪೊಲೀಸ ಠಾಣೆಗೆ ಬಂದು ಪಿರ್ಯಾದಿಯನ್ನು ಕೊಟ್ಟರು. ದೂರು ಕೊಟ್ಟ ನಂತರ ಪೊಲೀಸರು ಪಂಚನಾಮೆ ಮಾಡಲು ಸ್ಥಳಕ್ಕೆ ಬಂದರು. ನಾನು ಆ ಪಂಚನಾಮೆಗೆ ಸಾಕ್ಷಿಯಾಗಿ ಸಹಿ ಹಾಕಿದೆ. ಅಲ್ಲಿ ಪೊಲೀಸರು ಪೊಟೊ ತೆಗೆದುಕೊಂಡರು.

2. ಸದರಿ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಮಾಡಿ, ಫೊಟೊ ತೆಗೆದರು. ಸದರಿ ಪಂಚನಾಮೆಯನ್ನು ನಿ.ಪಿ-1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಪೋಟೊವನ್ನು ನಿ.ಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ಫೊಟೊದಲ್ಲಿ ತಾನು ಇರುವಿಕೆಯನ್ನು ಗುರತಿಸಿಕೊಂಡಿರುತ್ತಾರೆ. ಆರೋಪಿಯು ಸಹಿ ಮಾಡಿಕೊಟ್ಟಂತ ಬಾಂಡ್ ಅನ್ನು ಈಗ ನೋಡುತ್ತಿದ್ದೇನೆ, ಸದರಿ ಬಾಂಡ್ ಈಗ ನಿ.ಪಿ-3 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ